# MIDH ಯೋಜನೆಯ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಉಪ ಯೋಜನೆಯ ತರಕಾರಿ ಬೀಜೋತ್ಪಾದನೆ ಕಾರ್ಯಕ್ರಮಕ್ಕೆ ಸಹಾಯಧನ ಮಂಜೂರು ಮಾಡುವ ಬಗ್ಗೆ ಮಾರ್ಗಸೂಚಿ

## 1. ಕಾರ್ಯಕ್ರಮದ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶ:

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ವಿವಿಧ ತರಕಾರಿ ಬೆಳೆಗಳನ್ನು ಬೆಳೆಯಲು, ಆಯಾ ಭಾಗದ ರೈತರಿಗೆ ಅಗತ್ಯವಾದ ಅಧಿಕ ಇಳುವರಿ ನೀಡುವ ಸುಧಾರಿತ ವಿವಿಧ ತರಕಾರಿ ತಳಿಗಳ ಬಿತ್ತನೆ ಬೀಜಗಳ ಬೀಜೋತ್ಪಾದನೆ ಕೈಗೊಳ್ಳಲು ಸಾರ್ವಜನಿಕ ಮತ್ತು ಖಾಸಗಿ ವಲಯದಡಿ ಸಹಾಯಧನ ನೀಡುವ ಅವಕಾಶ ಇರುತ್ತದೆ.

## 2. ಕಾರ್ಯಕ್ರಮದ ಉದ್ದೇಶ:

ತರಕಾರಿ ಬೆಳೆಗಳನ್ನು ಬೆಳೆಯಲು ಉತ್ತಮ ಗುಣಮಟ್ಟದ ಬಿತ್ತನೆ ಬೀಜ ಅತಿ ಮುಖ್ಯವಾಗಿರುತ್ತದೆ. ಒಳ್ಳೆಯ ಬಿತ್ತನೆ ಬೀಜಗಳನ್ನು ಕಡಿಮೆ ಬೆಲೆಯಲ್ಲಿ ರೈತರಿಗೆ ಪೂರೈಸಲು ಅನುಕೂಲವಾಗುವಂತೆ, ಬಿತ್ತನೆ ಬೀಜ (Hybrids, ಸುಧಾರಿತ ಬಿತ್ತನೆ ಬೀಜ, Open pollinated varieties) ಉತ್ಪಾದನೆ ಮಾಡಲು ಸಹಾಯಧನ ನೀಡಿ, ಮಾರುಕಟ್ಟೆ ದರಕ್ಕಿಂತ ಕಡಿಮೆ ದರದಲ್ಲಿ ರೈತರಿಗೆ ಬೀಜಗಳನ್ನು ಒದಗಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ.

## 3. ಕಾರ್ಯಕ್ರಮದ ವಿವರ:

| Sl.No. | Components | Unit cost | Subsidy pattern |
|---|---|---|---|
| 1 | Open pollinated crops | Rs. 35,000/ha | 100% for public sector and 35% (Rs. 12,250/ha) for private sector limited to 5ha/beneficary. |
| 2 | Hybrid seeds | Rs. 1,50,000/ha | 100% for public sector and 35% (Rs. 52,500/ha) for private sector limited to 5ha/beneficiary. |

ಸದರಿ ಕಾರ್ಯಕ್ರಮವು ಪ್ರಸ್ತಾವನೆ ಆಧಾರಿತ ಕಾರ್ಯಕ್ರಮವಾಗಿದ್ದು (Project based), ಖಾಸಗಿ ವಲಯದಲ್ಲಿ Credit linked back ended subsidy ಆಗಿರುತ್ತದೆ.

4. **ತಾಂತ್ರಿಕ ವಿಶಿಷ್ಟತೆ:**

- ರೈತರು  ಬೀಜೋತ್ಪಾದನೆ ತೆಗದುಕೊಳ್ಳುವ ಜಮೀನಿನ ವಿಸ್ತೀರ್ಣಕ್ಕೆ ತಕ್ಕಂತೆ ಅಗತ್ಯವಾದ ನೀರಾವರಿ ಸೌಕರ್ಯ ಇರುವುದನ್ನು ಖಚಿತಪಡಿಸಿಕೊಳ್ಳಬೇಕು.
- ಉದ್ದೇಶಿತ ಬೆಳೆಯ ಮತ್ತು ತಳಿಯ ಪ್ರಮಾಣಿತ ಅಥವಾ ಲೇಬಲ್ ಮಾಡಿದ (Certified or Labeled) ಬೀಜ ಬೆಳೆಯಲು ಅವಶ್ಯಕವಿರುವ Foundation/Certified ಬೀಜವನ್ನು ಉಪಯೋಗಿಸಬೇಕು.

5. **ಸಹಾಯಧನ ಪಡೆಯಲು ಇರಬೇಕಾದ ಅರ್ಹತೆ:**

- ಫಲಾನುಭವಿಗಳು ರೈತರಾಗಿದ್ದು ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು (ನೋಟರಿರವರಿಂದ ನೋಂದಣಿಯಾಗಿರಬೇಕು). ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ, ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.

6. **ಅರ್ಜಿ ಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಯ ಆಯ್ಕೆ:**

- ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು NHM ಯೋಜನೆಯ ಮಾರ್ಗಸೂಚಿ ಪ್ರಕಾರ ತರಕಾರಿ ಬೀಜೋತ್ಪಾದನೆ  ಕಾರ್ಯಕ್ರಮದಡಿ ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಜಿಲ್ಲೆಗೆ ನಿಗಧಿ ಪಡಿಸಿರುವ ಗುರಿಯ ಮಿತಿಯಲ್ಲಿ, ಸ್ಥಳೀಯ ಪತ್ರಿಕೆಗಳು, ವಿವಿಧ ಮಾಧ್ಯಮಗಳ ಮುಖಾಂತರವಾಗಿ ಹಾಗೂ ಜಿಲ್ಲೆಯ ಎಲ್ಲಾ ಕಛೇರಿ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.
- ಆಸಕ್ತಿಯುಳ್ಳ ರೈತರು ಅರ್ಜಿಯನ್ನು ದಾಖಲಾತಿಗಳೊಂದಿಗೆ  ತಾಲ್ಲೂಕು ಹಿಸತೋನಿ/ ಸತೋನಿ ಕಛೇರಿಗೆ ಸಲ್ಲಿಸುವುದು.

**7. ಪ್ರಸ್ತಾವನೆ ಸಲ್ಲಿಸುವ ವಿಧಾನ:**

- ತರಕಾರಿ ಬೀಜೋತ್ಪಾದನೆ ಕಾರ್ಯಕ್ರಮವು "Credit linked back ended subsidy" ಆಗಿದ್ದು, ಪ್ರಸಕ್ತ ಸಾಲಿನಲ್ಲಿ Crop loan ಮಂಜೂರು ಆಗಿರಬೇಕು. ಬ್ಯಾಂಕ್ ಸಾಲದ ಮೊತ್ತ ಅರ್ಹ ಸಹಾಯಧನಕ್ಕಿಂತ ಹೆಚ್ಚಾಗಿ ಇರಬೇಕು ಮತ್ತು ಈ ಬಗ್ಗೆ ಬ್ಯಾಂಕ್ ವತಿಯಿಂದ ಸಾಲ ಮಂಜೂರಾತಿ ಪತ್ರ ಮತ್ತು ಸಾಲದ ಖಾತೆ ಸಂಖ್ಯೆಯನ್ನು ಒದಗಿಸಬೇಕು.

**8. ಸಹಾಯಧನ ವಿತರಣೆ:**

- ನಿರ್ದೇಶನಾಲಯದಿಂದ ಮಂಜೂರಾತಿ ಆದೇಶ ದೊರಕಿದ ನಂತರ, ಜಿಲ್ಲೆಯ ತೋಉನಿ (ಜಿಪಂ) ರವರ ಎಲ್ಲಾ ದಾಖಲೆಗಳನ್ನು ಹಾಗೂ ಹಿಸತೋನಿ ನೀಡಿರುವ ವರದಿಯನ್ನು ಪರಿಶೀಲಿಸಿ ಬೀಜೋತ್ಪಾದನೆ ಪೂರ್ಣಗೊಂಡ ನಂತರ ಸಹಾಯಧನದ ಮೊತ್ತವನ್ನು ಬಿಡುಗಡೆ ಮಾಡುವುದು.
- ಫಲಾನುಭವಿಯು ತರಕಾರಿ ಬೀಜೋತ್ಪಾದನೆ ಸಲುವಾಗಿ ತೆಗೆದುಕೊಂಡಿರುವ Crop Loan ಬ್ಯಾಂಕ್ ಖಾತೆಗೆ ನಿಯಮಾನುಸಾರ ಮಾರ್ಗಸೂಚಿಗಳನ್ನು ಪಾಲಿಸಿಕೊಂಡು NEFT/ECS ಮುಖಾಂತರ ಜಮಾ ಆಗುವಂತೆ ಸಹಾಯಧನ ನೀಡಲು ಕ್ರಮ ವಹಿಸುವುದು.
- ಫಲಾನುಭವಿ ಈ ಹಿಂದೆ ರಾಜ್ಯ/ಕೇಂದ್ರ ಸರ್ಕಾರದ ಯಾವುದೇ ಬೀಜೋತ್ಪಾದನೆ ಕಾರ್ಯಕ್ರಮದಡಿ ಸಹಾಯಧನ ಪಡೆದಿದ್ದಲ್ಲಿ ಮತ್ತೆ ಅದೇ ಘಟಕಕ್ಕೆ ಸಹಾಯಧನ ಪಡೆಯಲು ಅರ್ಹರಾಗಿರುವುದಿಲ್ಲ.

**9. ಅನುಷ್ಠಾನ ವೇಳಾಪಟ್ಟಿ**

- ಬೀಜೋತ್ಪಾದನೆ ಕಾರ್ಯಕ್ರಮವನ್ನು ಹಾಲಿ ಆರ್ಥಿಕ ವರ್ಷದ ಅಂತ್ಯದೊಳಗಾಗಿ ಮುಕ್ತಾಯ ಮಾಡಿ ಸಹಾಯಧನ ಪಾವತಿಸಬೇಕು. ಇಲ್ಲದಿದ್ದಲ್ಲಿ, ಮಂಜೂರಾತಿ ಆದೇಶವು ತನ್ನಿಂದ ತಾನೇ ರದ್ದಾಗುತ್ತದೆ. ಯಾವುದೇ ಕಾರಣಕ್ಕೂ ಮುಂದಿನ ಆರ್ಥಿಕ ವರ್ಷದಲ್ಲಿ ಬೀಜೋತ್ಪಾದನೆಗೆ ಅನುದಾನ ಬಿಡುಗಡೆ ಮಾಡಲು ಅವಕಾಶವಿರುವುದಿಲ್ಲ.

**10. ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು (Reporting and documentation)**

- ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗಿರುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತುಶ್ರವಣ) ದಾಖಲಿಸಿ ಇವುಗಳ ಸಾಫ್ಟ್ ಕಾಪಿ

ಮತ್ತು ಹಾರ್ಡ್ ಕಾಪಿಯನ್ನು **ಕ.ರಾ.ತೋ.ಮಿ.ಪಿ. ಬೆಂಗಳೂರು** ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ತೋಟಗಾರಿಕೆ ಮಾಹಿತಿ ಕೇಂದ್ರ) ರವರಿಗೆ ಕಳುಹಿಸುವುದು.

ಮುಂದಿನ ಆದೇಶದವರೆಗೂ ಈ ಮಾರ್ಗಸೂಚಿಯು ಚಾಲ್ತಿಯಲ್ಲಿರುತ್ತದೆ.

**ಮಿಷನ್ ನಿರ್ದೇಶಕರು**

**ಹಾಗೂ**

**ತೋಟಗಾರಿಕೆ ನಿರ್ದೇಶಕರು**

**ಖಾಸಗಿ ವಲಯದಡಿ ತರಕಾರಿ ಬೀಜೋತ್ಪಾದನೆ ಕಾರ್ಯಕ್ರಮದ ಚೆಕ್ ಲಿಸ್ಟ್**

| | | |
|---|---|---|
| 1 | ಫಲಾನುಭವಿಯು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆಯೇ? | ಹೌದು/ಇಲ್ಲ |
| 2 | ಫಲಾನುಭವಿಯು ತನ್ನ ಹೆಸರಿನಲ್ಲಿ ಹೊಂದಿರುವ ಜಮೀನಿನ ಪಹಣಿ ನೀಡಿರುತ್ತಾರೆಯೇ? | ಹೌದು/ಇಲ್ಲ |
| 3 | ಫಲಾನುಭವಿಯು ತನ್ನ ಕುಟುಂಬದ ಇತರೆ ಸದಸ್ಯರ ಹೆಸರಿನಲ್ಲಿರುವ ಪಹಣಿ ನೀಡಿದ್ದಲ್ಲಿ ಅಥವಾ ಜಂಟಿ ಖಾತೆ ಇದ್ದಲ್ಲಿ ಕುಟುಂಬದವರ ಒಪ್ಪಿಗೆ ಪತ್ರ ನೀಡಿರುವರೇ? | ಹೌದು/ಇಲ್ಲ |
| 4 | ಘಟಕದ ಯೋಜನಾ ಪ್ರಸ್ತಾವನೆ, ಅಂದಾಜು ಪಟ್ಟಿ ಲಗತ್ತಿಸಿರುತ್ತಾರೆಯೇ? | ಹೌದು/ಇಲ್ಲ |
| 5 | ಫಲಾನುಭವಿಯೂ ರಾಜ್ಯ/ಕೇಂದ್ರ ಸರ್ಕಾರದಿಂದ ಇದೇ ಕಾರ್ಯಕ್ರಮಕ್ಕೆ ಸಹಾಯಧನ ಪಡೆದಿರುವುದಿಲ್ಲವೆಂಬ ಬಗ್ಗೆ ನೋಟರಿ/ಮುಚ್ಚಳಿಕೆ ಪತ್ರ ಲಗತ್ತಿಸಿರುವರೇ? | ಹೌದು/ಇಲ್ಲ |
| 6 | ಬಿತ್ತನೆ ಬೀಜಗಳನ್ನು ಖರೀದಿಸಿದ ಮೂಲಕ ಕುರಿತು ವಿವರ ನೀಡಿರುತ್ತಾರೆಯೇ? | ಹೌದು/ಇಲ್ಲ |
| 7 | ತರಕಾರಿ ಬೀಜತ್ಪಾದನೆಗಾಗಿ ಆಯ್ಕೆ ಮಾಡಿರುವ ಬೆಳೆ, ತಳಿ ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆಯೇ? | ಹೌದು/ಇಲ್ಲ |
| 8 | ಫಲಾನುಭವಿಯು ತರಕಾರಿ ಬೀಜೋತ್ಪಾದನೆಗಾಗಿ ಸಾಲ ಪಡೆದಿದ್ದಾರೆಯೇ?<br>i. ಸಾಲದ ಪಡೆದಿರುವ ಬ್ಯಾಂಕ್ ಹೆಸರು ಮತ್ತು ವಿಳಾಸ<br>ii. ಬ್ಯಾಂಕ್ ಸಾಲದ ಮೊತ್ತ | ಹೌದು/ಇಲ್ಲ |

| | | |
|---|---|---|
| | iii. ಬ್ಯಾಂಕ್ ಸಾಲ ಮಂಜೂರಾತಿ ಪತ್ರ ಲಗತ್ತಿಸಿದ್ದಾರೆಯೇ? | |
| 9 | ಕ್ಷೇತ್ರ/ತಾಕು ಛಾಯಾಚಿತ್ರ ಲಗತ್ತಿಸಿರುತ್ತಾರೆಯೇ? | ಹೌದು/ಇಲ್ಲ |
| 10 | ತಾಲ್ಲೂಕು ಅಧಿಕಾರಿಗಳ ಪರಿಶೀಲನಾ ವರದಿ ಲಗತ್ತಿಸಿದ್ದಾರೆಯೇ? | ಹೌದು/ಇಲ್ಲ |
| 11 | ಸದರಿ ಕಾರ್ಯಕ್ರಮಕ್ಕೆ ಸಹಾಯಧನ ನೀಡಲು ತೋಟಗಾರಿಕೆ ಉಪ ನಿರ್ದೇಶಕರು ರವರ ಶಿಫಾರಸ್ಸು ಮಾಡಿರುತ್ತಾರೆಯೇ? | ಹೌದು/ಇಲ್ಲ |
| 12 | ಕ್ರಿಯಾ ಯೋಜನೆಯಲ್ಲಿ ಗುರಿ ನಿಗಧಿಪಡಿಸಲಾಗಿದೆಯೇ? | ಹೌದು/ಇಲ್ಲ |

**ಸಾರ್ವಜನಿಕ ವಲಯದಡಿ ತರಕಾರಿ ಬೀಜೋತ್ಪಾದನೆ ಕಾರ್ಯಕ್ರಮದ ಚೆಕ್ ಲಿಸ್ಟ್**

| | | |
|---|---|---|
| 1 | ಸಂಸ್ಥೆಯ ಹೆಸರು ಮತ್ತು ವಿಳಾಸ | ಹೌದು/ಇಲ್ಲ |
| 2 | ಘಟಕದ ಯೋಜನಾ ಪ್ರಸ್ತಾವನೆ, ಅಂದಾಜು ಪಟ್ಟಿ ಲಗತ್ತಿಸಿರುತ್ತಾರೆಯೇ? | ಹೌದು/ಇಲ್ಲ |
| 3 | ತರಕಾರಿ ಬೀಜೋತ್ಪಾದನೆಗಾಗಿ ಆಯ್ಕೆ ಮಾಡಿರುವ ಬೆಳೆ, ತಳಿ, ವಿಸ್ತೀರ್ಣ ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆಯೇ? | ಹೌದು/ಇಲ್ಲ |
| 4 | ತಾಲ್ಲೂಕು ಅಧಿಕಾರಿಗಳ ಪರಿಶೀಲನಾ ಸಮಿತಿ ದೃಢೀಕರಣ ಲಗತ್ತಿಸಿದ್ದಾರೆಯೇ? | ಹೌದು/ಇಲ್ಲ |
| 5 | ಸಂಶೋಧನಾ ನಿರ್ದೇಶಕರವರ ಶಿಫಾರಸ್ಸು ಪತ್ರ/Commitment letter ಲಗತ್ತಿಸಿದ್ದಾರೆಯೇ? | ಹೌದು/ಇಲ್ಲ |
| 6 | ಘಟಕದ ಛಾಯಾಚಿತ್ರ ಲಗತ್ತಿಸಿರುತ್ತಾರೆಯೇ? | ಹೌದು/ಇಲ್ಲ |
| 7 | ಸದರಿ ಕಾರ್ಯಕ್ರಮಕ್ಕೆ ಸಹಾಯಧನ ನೀಡಲು ತೋಟಗಾರಿಕೆ ಉಪ ನಿರ್ದೇಶಕರು ರವರ ಶಿಫಾರಸ್ಸು ಮಾಡಿರುತ್ತಾರೆಯೇ? | ಹೌದು/ಇಲ್ಲ |
| 8 | ಕ್ರಿಯಾ ಯೋಜನೆಯಲ್ಲಿ ಗುರಿ ನಿಗಧಿಪಡಿಸಲಾಗಿದೆಯೇ? | ಹೌದು/ಇಲ್ಲ |
| 9 | ಘಟಕವಾರು ವೆಚ್ಚದ ವಿವರ (Detailed break up for each crop ha. basis) | ಹೌದು/ಇಲ್ಲ |